(10)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2014-15ನೇ ಸಾಲಿನ ಇತರೆ ಕೃಷಿ ಯೋಜನೆಗಳು ಯೋಜನೆಯಡಿ "ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ" ಕಾರ್ಯಕ್ರಮಕ್ಕೆ "ಇತರೆ ಕೃಷಿ ಯೋಜನೆಗಳು" ಯೋಜನೆಯ ಲೆಕ್ಕಶೀರ್ಷಿಕೆ ಯಿಂದ ರೂ. 40 ಲಕ್ಷ ಮೊತ್ತದ ಅನುದಾನವನ್ನು ಪುನರ್ ವಿನಿಯೋಗ ಮಾಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂ:ಕೃಇ/80/ಕೃಯೋಕಾ/2011 (ಭಾ-1), ದಿ: 30-09-2013

2. ಕೃಷಿ ಇಲಾಖೆ ಪ್ರಸ್ತಾವನೆ ಸಂ: ಪಿಎಲ್ಎನ್/ತಾಂ-/ವಿ.ವೇ&ಪ್ರೋ /ಪು.ವಿ /2014-15 ದಿ: 09/04/2014

**ಪ್ರಸ್ತಾವನೆ:**

2014-15ನೇ ಸಾಲಿನ ಆಯವ್ಯಯದಲ್ಲಿ "ಇತರೆ ಕೃಷಿ ಯೋಜನೆಗಳು" ಯೋಜನೆಯ ಲೆಕ್ಕಶೀರ್ಷಿಕೆ: 2401-00-800-1-40, ಉಪಶೀರ್ಷಿಕೆ: 117 ರಡಿ "ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ" ಕಾರ್ಯಕ್ರಮದಡಿ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ಮೊತ್ತ ವಿತರಿಸಲು ರೂ. 65.00 ಲಕ್ಷ ಮೊತ್ತವನ್ನು ಒದಗಿಸಲಾಗಿದೆ. ಮೇಲೆ ಓದಲಾದ ಕ್ರಮಾಂಕ(1)ರ ಆದೇಶದನ್ವಯ ಕೃಷಿ ಪ್ರಶಸ್ತಿ ಬಹುಮಾನದ ಮೊತ್ತ ಹೆಚ್ಚಳವಾಗಿರುವುದರಿಂದ ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ. 105.00 ಲಕ್ಷ ಮೊತ್ತದ ಅವಶ್ಯಕತೆಯಿದ್ದು, ಹೆಚ್ಚುವರಿಯಾಗಿ ರೂ. 40.00 ಲಕ್ಷ ಮೊತ್ತದ ಅವಶ್ಯಕತೆಯಿರುತ್ತದೆ.

ಮುಂದುವರೆದು, "ಇತರೆ ಕೃಷಿ ಯೋಜನೆಗಳು" ಯೋಜನೆಯ ಲೆಕ್ಕಶೀರ್ಷಿಕೆ: 2401-00-800-1-40 ಉಪಶೀರ್ಷಿಕೆ: 059 ಅಡಿ ಒದಗಿಸಿರುವ ಒಟ್ಟು ರೂ. 19325.00 ಲಕ್ಷದಲ್ಲಿ ರೂ. 590.00 ಲಕ್ಷ ಉಳಿತಾಯವಾಗುವ ಸಂಭವವಿದ್ದು, ರೂ. 40.00 ಲಕ್ಷ ಮೊತ್ತವನ್ನು ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ಮೊತ್ತ ವಿತರಿಸಲು ಅದೇ ಲೆಕ್ಕಶೀರ್ಷಿಕೆಯ ಉಪಶೀರ್ಷಿಕೆ: 117 ಅಡಿ ಪುನರ್‌ವಿನಿಯೋಗ ಮಾಡಿ ಆದೇಶ ಹೊರಡಿಸಬೇಕೆಂದು ಕೃಷಿ ನಿರ್ದೇಶಕರು ಕ್ರಮಾಂಕ (2) ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕೃಷಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/85/ಕೃರಾಗೊ/2014, ಬೆಂಗಳೂರು, ದಿನಾಂಕ: 19-11-2014**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ ಮುಂದುವರೆಸಲಾದ ರಾಜ್ಯವಲಯ ಚಾಲ್ತಿಯೋಜನೆ "ಇತರೆ ಕೃಷಿ ಯೋಜನೆಗಳು" ಲೆಕ್ಕಶೀರ್ಷಿಕೆ: 2401-00-800-1-40 ಅಡಿ ಉಪಯೋಜನೆಯಾದ "ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ" ಕಾರ್ಯಕ್ರಮಕ್ಕೆ (ಉಪ ಶೀರ್ಷಿಕೆ: 117 ರಡಿ) ಒದಗಿಸಲಾದ ಅನುದಾನದಲ್ಲಿನ ಕೊರತೆಯನ್ನು ನೀಗಿಸಲು "ಇತರೆ ಕೃಷಿ ಯೋಜನೆಗಳು" ಲೆಕ್ಕಶೀರ್ಷಿಕೆ: 2401-00-800-1-40 ಉಪ ಶೀರ್ಷಿಕೆ: 059 ಅಡಿ ಉಳಿತಾಯವಾಗುವ ಒಟ್ಟು ಅನುದಾನದಲ್ಲಿ ರೂ. 40.00 ಲಕ್ಷ ಮೊತ್ತವನ್ನು (ನಲವತ್ತು ಲಕ್ಷ ರೂಪಾಯಿಗಳು ಮಾತ್ರ) ಪುನರ್ ವಿನಿಯೋಗ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ (ಪುನರ್ ವಿನಿಯೋಗದ ವಿವರಣಾ ನಮೂನೆ ಲಗತ್ತಿಸಿದೆ).

ರಾಜ್ಯವಲಯ ಯೋಜನೆಗಳಡಿ ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗಸೂಚಿಗಳನ್ನು ಅನುಸರಿಸಿ ಕೃಷಿ ಆಯುಕ್ತರು ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಈ ಆದೇಶವನ್ನು ಸರ್ಕಾರದ ಆದೇಶ ಸಂ: ಎಫ್‌ಡಿ 11 ಟಿಎಫ್‌ಪಿ 2007 ದಿನಾಂಕ 27-11-2007ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ ಕೃಇ 69 ಆಂಆಸ 2014 ದಿನಾಂಕ:28/05/2014ರಲ್ಲಿನ ಸಹಮತಿಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

**ಪ್ರತಿಯನ್ನು:-**

1) ಪಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2) ಪಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ,ಬೆಂಗಳೂರು-01.
3) ಪಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು
6) ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
7) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
8) ಸರ್ಕಾರಧ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
9) ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ (ಕೃಷಿ ಸೇವೆ).
10) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
11) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
12) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ವಿ.ವಿ ಟವರ್, ಬೆಂಗಳೂರು.
13) ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
14) ಉಪ ನಿರ್ದೇಶಕರು, ಸಮಗ್ರ ಖಜಾನೆ ಗಣಕೀಕರಣ ವಿಭಾಗ, ಖನಿಜ ಭವನ, ಬೆಂಗಳೂರು
15) ಶಾಖಾಧಿಕಾರಿ, ಕೃಷಿ ಯೋಜನಾ ಘಟಕ, ಎ ಕೃಷಿ ಇಲಾಖೆ.
16) ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

ಕೃಷಿ ಇಲಾಖೆ

**ಪ್ರಪತ್ರ 22–ಎ–ಕೆ.ಎಫ್.ಸಿ. (ಅನುಚ್ಛೇದ308)**

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚಿನ ಹಣ ಹಂಚಿಕೆ (Allotment) ಗಳಲ್ಲಿ ಉಪಬಂಧ ಕಲ್ಪಿಸಿದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸಬೇಕಾದ ಪುನರ್ವಿನಿಯೋಗದ ವಿವರಣೆ

| (ರಮುಂಗಡ ಪತ್ರದ ಪ್ರಧಾನ, ಚಿಕ್ಕ ಉಪ ಮತ್ತು ವಿವರವಾದ ಶೀರ್ಷಿಕೆಗಳು | ಹೆಚ್ಚಿಸಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | ಕಡಿಮೆ ಮಾಡಲು ಪ್ರಸ್ತಾಪಿಸಲಾದ ಅಂದಾಜಿನ ಶೀರ್ಷಿಕೆ | | | | ಷರಾ |
|---|---|---|---|---|---|---|---|---|---|
| | ಮಂಜೂರಾದ ಆಯವ್ಯಯ ಅಂದಾಜಿನಲ್ಲಿ ರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್ಮೆಂಟ್ ವಿವರ | ಮಂಜೂರಾದ ಆಯವ್ಯಯ ಅಂದಾಜಿನಲ್ಲಿ ರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್ಮೆಂಟ್ ವಿವರ | ಹಣ ಹಂಚಿಕೆ(Allotment) ಮೀರಿರುವುದಕ್ಕೆ ಮತ್ತು ಉಳಿತಾಯ ನಿರೀಕ್ಷಿಸುವುದಕ್ಕೆ ಕಾರಣಗಳನ್ನು ಇಲ್ಲಿ ಪೂರ್ಣವಾಗಿ ವಿವರಿಸಬೇಕು. |
| 1.2401–00–800–1–40 (ಉ.ಶೀ. 117) | 65.00 | 0.00 | 65.00 | 40.00 | – | – | – | – | 2014–15ನೇ ಸಾಲಿನ ಆಯವ್ಯಯದಲ್ಲಿ "ಇತರೆ ಕೃಷಿ ಯೋಜನೆಗಳು" ಯೋಜನೆಯ ಲೆಕ್ಕಶೀರ್ಷಿಕೆ: 2401–00–800–1–40, ಉಪಶೀರ್ಷಿಕೆ: 117 ರಡಿ "ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ" ಕಾರ್ಯಕ್ರಮದಡಿ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ಮೊತ್ತ ವಿತರಿಸಲು ರೂ. 65.00 ಲಕ್ಷಗಳನ್ನು ಒದಗಿಸಲಾಗಿದೆ. ಕೃಷಿ ಪ್ರಶಸ್ತಿ ಬಹುಮಾನದ ಮೊತ್ತ ಹೆಚ್ಚಳವಾಗಿರುವುದರಿಂದ ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ. 105.00 ಲಕ್ಷಗಳ ಅವಶ್ಯಕತೆಯಿದ್ದು, ಹೆಚ್ಚುವರಿಯಾಗಿ ರೂ. 40.00 ಲಕ್ಷಗಳ ಅವಶ್ಯಕತೆಯಿರುತ್ತದೆ. |
| 1.2401–00–800–1–40 (ಯೋಜನೆ) (ಉ.ಶೀ.059) | – | – | – | – | 19325.00 | 0.00 | 18735.00 | 40.00 | "ಇತರೆ ಕೃಷಿ ಯೋಜನೆಗಳು" ಯೋಜನೆಯ ಲೆಕ್ಕಶೀರ್ಷಿಕೆ: 2401–00–800–1–40 ಉಪಶೀರ್ಷಿಕೆ: 059 ಅಡಿ ಒದಗಿಸಿರುವ ಒಟ್ಟು ರೂ. 19325.00 ಲಕ್ಷಗಳಲ್ಲಿ ರೂ. 590.00 ಲಕ್ಷಗಳು ಉಳಿತಾಯವಾಗುವ ಸಂಭವವಿದ್ದು, ಅದರಲ್ಲಿ ರೂ. 550.00 ಲಕ್ಷಗಳನ್ನು "ಹಾವು ಕಡಿತಕ್ಕೆ ಪರಿಹಾರ" ಕಾರ್ಯಕ್ರಮಕ್ಕೆ ಪ್ರಸ್ತಾಪಿಸಲಾಗಿದೆ. ಉಳಿದ ರೂ. 40.00 ಲಕ್ಷಗಳನ್ನು ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ಮೊತ್ತ ವಿತರಿಸಲು ಅದೇ ಲೆಕ್ಕಶೀರ್ಷಿಕೆಯ ಉಪಶೀರ್ಷಿಕೆ: 117 ಅಡಿ ಪುನರ್‌ವಿನಿಯೋಗ ಮಾಡಿ ಮಾಡಿಕೊಳ್ಳಲಾಗುವುದು. |

**ಸರ್ಕಾರದ ಆದೇಶ ಸಂಖ್ಯೆ: ಕೃಇ/85/ಕೃರಾಗೊ/2014, ಬೆಂಗಳೂರು, ದಿನಾಂಕ: 19/11/2014.**

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).